**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *31.07.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ನಾನು ಬಸವಟ್ಟಿಗೆ ಗ್ರಾಮದಲ್ಲಿ ನನ್ನ ಗಂಡನ ಜೊತೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನನ್ನ ತಂದೆ ಜಮೀನನ್ನು ಉಳುಮೆ ಮಾಡಿಸುವ ಸಂದರ್ಭದಲ್ಲಿ ನಾನು ಮರಳ್ಳಿಪುರದಲ್ಲಿ ಇರಲಿಲ್ಲ ಎಂದರೆ ಸರಿ. ಮರ ಕಡಿಸಿದಾಗಲೂ ಸಹ ನಾನು ಇರಲಿಲ್ಲ ಎಂದರೆ ಸರಿ. ನ್ಯಾಯಾ ಮಾಡಿದಂತಹ ಸಂದರ್ಭದಲ್ಲಿಯೂ ಸಹ ನಾನು ಮರಳ್ಳಿಪುರದಲ್ಲಿ ಇರಲಿಲ್ಲ ಎಂದರೆ ಸರಿ. ತಂದೆಗೆ ಗಾಯಗಳು ಆಗಿರುತ್ತವೆ ಎಂದು ವರ್ತಮಾನ ಗೊತ್ತಾದ ಮೇಲೆ ನಾನು ನೇರವಾಗಿ ಮಿಷನ್ ಆಸ್ಪತ್ರೆಗೆ ಹೋಗಿದ್ದೆ. ನನ್ನ ತಂದೆ ಸಾಯುವ ಪೂರ್ವದಲ್ಲಿ ನಾನು ನನ್ನ ಸೋದರ ಮಾವ ಮಹದೇವಸ್ವಾಮಿ ಮತ್ತು ಮಹೇಶನನ್ನು ಭೇಟಿ ಯಾಗಿರಲಿಲ್ಲ. ನನಗೆ ನನ್ನ ತಂಗಿ ನನ್ನ ತಂದೆಗೆ ಗಾಯಗಳು ಹೇಗೆ ಆಗಿದೆ ಎಂದು ಫೋನ್ ಮಾಡಿ ಹೇಳಿದರು ನಾವು ನಂತರ ಮಿಷನ್ ಆಸ್ಪತ್ರೆಗೆ ಹೋದೆವು. ಆಗ ನನ್ನ ಗಂಡ ಇರಲಿಲ್ಲ. ಮಹದೇವಸ್ವಾಮಿ ನನ್ನ ಜೊತೆಯಲ್ಲಿ ಇರಲಿಲ್ಲ ಬೇರೆ ನಮ್ಮ ಊರಿನವರು ನಮ್ಮನ್ನು ಕಾರಿನಲ್ಲಿ ಕರೆದುಕೊಂಡು ಹೋಗಿದ್ದರು. ನಾನು ಮತ್ತು ನನ್ನ ತಂಗಿ ಕವಲಂದೆ ಪೊಲೀಸ್ ಠಾಣೆಗೆ ಹೋಗಿರಲಿಲ್ಲ ನೇರವಾಗಿ ಮೈಸೂರಿನ ಮಿಷನ್ ಆಸ್ಪತ್ರೆಗೆ ಹೋಗಿದ್ದೆವು. ಮಿಷನ್ ಆಸ್ಪತ್ರೆಗೆ ಹೋದಾಗ ರಾತ್ರಿ 7.30 ಯಿಂದ 8.00 ಗಂಟೆಯಾಗಿರಬಹುದು. ನಾನು ಆಸ್ಪತ್ರೆಗೆ ಹೋದ ಮೇಲೆ 1 ನೇ ಆರೋಪಿ ತನ್ನ ತಂದೆಗೆ ಹೊಡೆದಿರುತ್ತಾನೆ ಎಂದು ಗೊತ್ತಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾರು ಹೊಡೆದಿದ್ದಾರೆ ಎಂದು ನನಗೆ ಗೊತ್ತಾಗಿತ್ತು ಎಂದು ನಾನು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯವರ ಸಾವು ಆದ ಮೇಲೆ ಪೊಲೀಸರು ಆಸ್ಪತ್ರೆಗೆ ಬಂದಿದ್ದರು ಆ ವೇಳೆಯಲ್ಲಿ ನನ್ನ ತಾಯಿ ಪೊಲೀಸರಿಗೆ ಹೇಳಿಕೆ ಕೊಟ್ಟ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಿಷನ್ ಆಸ್ಪತ್ರೆಯಲ್ಲಿ ಇದ್ದಾಗ ನನ್ನ ತಾಯಿಯವರ ಮುಖಾಂತರ ಪೊಲೀಸರಿಗೆ ದೂರನ್ನು ಕೊಡಿಸಲು ನಾನು ಪ್ರಯತ್ನ ಪಟ್ಟಿರುವುದಿಲ್ಲ. ಆರೋಪಿತರು ನನ್ನ ತಂದೆಯ ಸಾವಿಗೆ ಕಾರಣರು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನನ್ನ ತಂದೆಯ ಸಾವಿನ ನೈಜ ಕಾರಣ ಗೊತ್ತಿದ್ದರೂ ಸಹ ಆರೋಪಿತರ ಮೇಲೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
***ಮೈಸೂರು***